ಶ್ರೀ ರಾಮಕೃಷ್ಣ ಹೆಗ್ಗಡೆ.—ಹೇಳಿದೆ.

ಶ್ರೀ ಬಿ. ಎಚ್. ಬೋರಣ್ಣ ಗೌಡ.—ಒದಗಿಸಿರತಕ್ಕ ಹಣ ಸರಿಯಾಗಿ ಖರ್ಚಾಗಿದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದಕ್ಕೆ ಆಡಿಟ್‌ನವರು ಯಾರಾದರೂ ಇದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದ್ದಾರೆ. ಖರ್ಚು ಆಡಿಟ್ಟಿಗೊಳಪಟ್ಟಿರುತ್ತದೆ. ಅಷ್ಟೇ ಅಲ್ಲ ಸಂಬಂಧ ಪಟ್ಟ ಈ ಖಾತೆಗೆ ಅಧಿಕಾರಿಗಳು ಮತ್ತು ನಾನೂ ಕೂಡ ಅನೇಕ ಕಡೆ ಇದನ್ನು ತನಿಖೆ ಮಾಡುತ್ತೇನೆ.

ಶ್ರೀ ಟಿ. ಕೆ. ಕಂಬಳಿ.—(*f*) ಪ್ರಶ್ನೆಗೆ ಉತ್ತರದಲ್ಲಿ 'ಸ್ಥಳೀಯ ಪ್ರಯತ್ನವನ್ನೂ ಹೆಚ್ಚಿಸಬೇಕೆಂದು' ಉತ್ತರ ಹೇಳಿದ್ದೀರಿ. ಸ್ಥಳೀಯ ಪ್ರಯತ್ನ ಎಂದರೆ ಯಾವಯಾವುದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಎಂದರೆ ಜನರಲ್ಲಿ ಉತ್ಸಾಹ ಹುಟ್ಟಿಸಿ ಅವರು ದೇಹ ಶ್ರಮ ತೆಗೆದು ಕೊಳ್ಳುವಂತೆ ಮಾಡುವುದು. ರಾಷ್ಟ್ರೀಯ ವಿಸ್ತರಣಾ ಯೋಜನೆಗೆ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ ಸಾಲದೆ ಇದ್ದರೆ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಒದಗಿಸಿರತಕ್ಕ ಹಣದಿಂದಲೂ ತೆಗೆದುಕೊಳ್ಳಬಹುದು. ಇದಕ್ಕೆಲ್ಲಾ ಮುಖ್ಯವಾಗಿ ಸ್ಥಾನಿಕ ಜನರ ಸಹಕಾರ ಬೇಕು.

ಶ್ರೀ ಜಿ. ಎಸ್. ಬೊಮ್ಮೆಗೌಡ.—ಈ ಇಲಾಖೆಯಲ್ಲಿ ಹೆಚ್ಚಿಗೆ ಹಣ waste ಆಗುತ್ತಿರುವುದು ತಮಗೆ ಗೊತ್ತಿದೆಯೇ? ಏಕೆಂದರೆ, ಏಳುಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರಲ್ಲಿ ಒಂದು ಲಕ್ಷರೂಪಾಯಿ ಸಿಬ್ಬಂದಿಗೂ ನಾಲ್ಕು ಲಕ್ಷ ರೂಪಾಯಿ ಆಡಿಟ್ಟಿಗೂ ಆದರೆ, ಇನ್ನು ಅವರು ಮಾಡತಕ್ಕ ಬೇರೆ ಕೆಲಸಗಳಿಗೆಷ್ಟು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಆದರೂ ಒಂದು ವಿಷಯ ಹೇಳಬಯಸುತ್ತೇನೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯೆಂದರೆ ಕೇವಲ ಇಲ್ಲಿ ಹೇಳಿರತಕ್ಕ ಕೆಲಸವಷ್ಟೆ ಅಲ್ಲ, ಇದಕ್ಕೂ ಹೆಚ್ಚಿಗೆ ಕೆಲಸವನ್ನು ಮಾಡಬಹುದು. Development department ಎಂಬ ದೃಷ್ಟಿಯಿಂದ ಖರ್ಚು ಮಾಡುತ್ತಿರುವುದರಿಂದ ಸ್ವಲ್ಪ ಹೆಚ್ಚಿಗೆಯೆಂದು ಕಾಣಬಹುದು. ಆದರೆ, ದೂರದೃಷ್ಟಿಯಿಂದ ನೋಡಿದರೆ ಈಗಿರತಕ್ಕ organisation ಕೆಲವು ಕ್ರಾಂತಿಕಾರಕ ಕಾರ್ಯಗಳನ್ನು ಎನಗುವುದಕ್ಕೆ ಸಾಧಕವಾಗಿದೆಯೆಂದು ಹೇಳಬಹುದು.

ಶ್ರೀ ಜಿ. ಎಸ್. ಬೊಮ್ಮೆಗೌಡ,—ತಮ್ಮ ಬ್ಲಾಕುಗಳಲ್ಲಿ ಈಗೇನಾದರೂ ಅಂಥ ಕ್ರಾಂತಿಕಾರಕ ಕೆಲಸಗಳು ನಡೆದಿವೆಯೇ ?

Mr. SPEAKER.—Can such a thing be done under the N.E.S. ?

Sri RAMAKRISHNA HEGDE.—Yes, surely.

ಶ್ರೀಮತಿ ಲೀಲಾವತಿ ಮಾಗಡಿ.—(*f*)ನಲ್ಲಿ ಹೇಳಿರತಕ್ಕ ಪ್ರಕಾರ ವಿದ್ಯಾಭ್ಯಾಸದ ನಲುವಾಗಿ ಒಂದು ಸ್ಕೂಲಿಗೆ ಹೆಚ್ಚಿಗೆ ಹಣ ಬೇಕಾದರೆ, ಎಜ್ಯುಕೇಷನ್ ಇಲಾಖೆಯಿಂದ ತೆಗೆದುಕೊಳ್ಳಬಹುದೆಂದು ಹೇಳಿದ್ದೀರಿ. ಆ ಪ್ರಕಾರ instructionಗಳನ್ನು ಕೊಟ್ಟಿದ್ದೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—Instructions ಹೋಗಿದೆ. ಮತ್ತು ಕೆಲವು ದಿವಸಗಳ ಹಿಂದೆ, ವಿದ್ಯಾಭ್ಯಾಸದ ಇಲಾಖೆಯಿಂದ ಕೂಡ circulars ಹೋಗಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಸಂಬಂಧದಲ್ಲಿ ಹೆಚ್ಚಿಗೆ ಹಣದ ಅವಶ್ಯಕತೆಯಿದೆಯೆಂದು ತೋರಿದರೆ ಶಿಕ್ಷಣ ಖಾತೆಯ ಹಣವನ್ನು ಉಪಯೋಗಿಸಿಕೊಳ್ಳಬಹುದು.

Amount deposited for Welfare of Harijans in Hallur Village.

Q.—1905. **Smt. YELLAVVA SAMBRANI** (Ranibennur).—

Will the Government be pleased to state :—

(*a*) whether the Depressed Classes Officer has deposited Rs. 1,000 in Dharwar Bank towards welfare of Harijans of Hallur village, Dharwar district ;

(*b*) the reasons for not utilising the above amount for Harijan welfare ?

A.—**Sri R. CHENNIGARAMAIAH** (Minister for Local Self-Government).—

(*a*) Yes.

(*b*) The question of formation of Co-operative Housing Society to the Harijans of this village has not been finalised as yet and so the above amount could not be utilised.

*ಶ್ರೀ ಆರ್. ಚೆನ್ನಿಗರಾಮಯ್ಯ.—ಒಂದು ವಿಷಯ ಪ್ರಶ್ನೆಯಲ್ಲಿ 'Depressed Class Officer', ಎಂದು ಕೇಳಿದ್ದಾರೆ. ಇದು ಬಹುಶಃ ತಪ್ಪಾಗಿ ಕೊಟ್ಟಿರಬಹುದು. Backward Class Officer ಎಂಬ ಹೆಸರಿನಲ್ಲಿ ಡಿಪಾಸಿಟ್ ಮಾಡಿದ್ದಾರೆ. ಆ ರೀತಿ ಪ್ರಶ್ನೆಯನ್ನು ತಿದ್ದಿ ಕೊಂಡು ಉತ್ತರ ಕೊಟ್ಟಿದೆ; ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀಮತಿ ಎಲ್ಲವ್ವ ಸಾಂಬ್ರಾಣಿ.—ಈ ಸೊಸೈಟಿಯು ರಿಜಿಸ್ಟರ್ ಆಗಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇಲ್ಲ.

ಶ್ರೀಮತಿ. ಎಲ್ಲವ್ವ ಸಾಂಬ್ರಾಣಿ.—ಯಾವ ಸ್ಟೇಜಿನಲ್ಲಿದೆ ?

ಶ್ರೀ ಆರ್. ಚೆನ್ನಿಗರಾಮಯ್ಯ.—ಅದು ಅಲ್ಲಿಗೇ ನಿಂತುಹೋಗಿದೆ. ರಿಜಿಸ್ಟ್ರಾರ್‌ರವರು ಈ ರೀತಿ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯನ್ನು ಮಾಡಬೇಕಾದ್ದಿಲ್ಲವೆಂದು ಹಾಗೆಯೇ ನಿಲ್ಲಿಸಿದ್ದಾರೆ.

ಶ್ರೀಮತಿ ಲೀಲಾವತಿ ಮಾಗಡಿ.—ಹರಿಜನರಿಗೆ ತಾವೇನಾದರೂ ಸೈಟುಗಳನ್ನು allot ಮಾಡಿದ್ದೀರಾ ?

ಅಧ್ಯಕ್ಷರು.—ಸೈಟ್‌ಗಳ ವಿಷಯ ಇಲ್ಲಿ ಬರುವುದಿಲ್ಲ.

Dr. R. NAGAN GOWDA.—Sir, the Hon'ble Minister was saying that the Registrar had thought it not necessary to form a society now. May I know the policy of the Government regarding formation of House Building Co-operative Societies, such as the one mentioned here ?

Sri R. CHENNIGARAMAIAH.—The society which is the subject matter of this question comes under a different classification. This was formed by the Bombay Government under the Post-War Reconstruction Scheme. After Reorganisation of States, the Registrar of Co-operative Societies thought it was not desirable to continue the society. He has suspended its work for the time being.

Dr. R. NAGAN GOWDA.—Why should the Registrar of the Co-operative Societies think it desirable to stop this Society from functioning, when everybody agrees that more and more of such societies should be formed ?

Sri R. CHENNIGARAMAIAH.—Here in Mysore we have a different system for construction of houses for Depressed Classes. There is no society as such in-charge of construction of houses. Probably the Registrar wanted to apply a uniform law and consequently he stopped this society.

Sri G. B. SHANKAR RAO.—I would like to know if the amounts would be returned to the persons concerned.

Sri R. CHENNIGARAMAIAH.—The amounts do not belong to any single individual. The Government had deposited money for the purpose of running the society, under the scheme for the removal of Untouchability. They allotted a sum of one thousand rupees to the village for starting a Housing Co-operative Society. The money does not belong to any individual and will come back to the Government.

ಶ್ರೀ ಸಿ. ಎಸ್. ಹುಲ್ಕೋಟಿ.—ಜಮಾ ಮಾಡಿದ್ದು ಯಾವಾಗ?

Sri R. CHENNIGARAMAIAH.—I think it was in 1955-56.

ಶ್ರೀಮತಿ ಲೀಲಾವತಿ ವೆಂಕಟೇಶ ಮಾಗಡಿ.—ಇವರು ತುಂಬಿರುವ ಹಣ ಕೇವಲ ಹರಿಜನರ ಅಭಿವೃದ್ಧಿಯ ನಲುವಾಗಿ ಮಾಡಿದ್ದಾರೆಯೇ, ಅಥವ ಕೇವಲ ಸೊಸೈಟಿಯ ನಲುವಾಗಿ ಮಾಡಿದ್ದಾರೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—Harijan welfareನಲ್ಲಿ Harijan Co-operative Housing Society ಬರುತ್ತದೆ. ಇಂಚಿಗ್ರೇಟ್ ಆದ ಮೇಲೆ ಎಲ್ಲ ಕಡೆಯೂ ಒಂದೇ ಪದ್ಧತಿ ಇರಲಿ ಎಂದು ಮಾಡಿದ್ದೇವೆ. ಬೊಂಬಾಯಿ ಕರ್ನಾಟಕದಲ್ಲಿರುವಂತೆ Co-operative society system ಇಲ್ಲಿಲ್ಲ. ಇಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಬೇರೆ system ಇದೆ.

Sri V. P. DEENADAYALU NAIDU.—Until the uniform policy is put through, will this scheme has to remain stagnant?

Sri R. CHENNIGARAMAIAH.—That uniform policy has already been put through.

Sri V. P. DEENADAYALU NAIDU What is the difficulty in utilising amount?

Sri R. CHENNIGARAMAIAH.—The question of utilising this amount will have to be examined now.

Dr. R. NAGAN GOWDA.—How many societies are there like this in the Bombay Karnatak Area?

Mr. SPEAKER.—That does not arise out of this question.

Sri A. R. PANCHAGAVI.—Has the Government sanctioned any alternative scheme for that village?

Sri R. CHENNIGARAMAIAH.—No.

Sri G. B. SHANKAR RAO.—Is there not a need for the formation of a society?

Sri R. CHENNIGARAMAIAH.—Under the existing system, there is no need for a society to be formed.

Sri G. B. SHANKAR RAO.—May I know whether the villagers have been intimated to that effect?

Sri R. CHENNIGARAMAIAH.—I do not know. That has to be ascertained.

Relief to the Sufferers in the Fire Accident at Harihar.

Q.—2146. Sri KUNDUR RUDRAPPA (Channagiri).—

Will the Government be pleased to state:—

(*a*) whether it is a fact that fire broke out in Harihar town Halladakeri about two years ago;

(*b*) whether any committee was constituted to give relief to the sufferers;

(*c*) the amount collected and the amount given by the Government as grant and relief;

(*d*) the number of houses burnt and the relief given to the sufferers?